
# ಶಂಕರಸ್ಮೃತಿ

## ಕಾಯಕಜೀವಿ ಲಿಂ. ಶ್ರೀ ಶಂಕರಪ್ಪ ವಿರೂಪಾಕ್ಷಪ್ಪ ತಡಸದ ಅವರ ಸ್ಮರಣೋತ್ಸವ ಗ್ರಂಥ



ಪ್ರಧಾನ ಸಂಪಾದಕರು
ಪ್ರಾ. ಅನಂತ ಭೀ. ಕುಲಕರ್ಣಿ
ಡಾ. ರಾಮು ಎಚ್. ಸಜ್ಜನ

Scanned with OKEN Scanner

Title- Importance of Voting in Indian Democracy
- Dr. Parashuram C.

# ಭಾರತದ ಪ್ರಜಾಪ್ರಭುತದಲ್ಲಿ ಮತದಾನದ ಮಹತ್ವ

• ಡಾ. ಪರಶುರಾಮ ಚಂದ್ರಪ್ಪ

"ಮತಪತ್ರವು ಬಂದೂಕಿನ ಬುಲೆಟ್ಟಿಗಿಂತ ಹೆಚ್ಚು ಶಕ್ತಿಶಾಲಿಯಾದದ್ದು"
"Ballot is Mightier than the bullet"

**ಪೀಠಿಕೆ**

ದಾನಗಳಲ್ಲಿ ಯಾವ ದಾನ ಶ್ರೇಷ್ಠ ಎಂದು ಕೇಳಿದಾಗ ನೇತ್ರದಾನ, ರಕ್ತದಾನ, ಅನ್ನದಾನ, ಜೀವದಾನ, ವಿದ್ಯಾದಾನ, ಭೂದಾನ, ಕನ್ಯಾದಾನ, ಸಮಾದಾನ ಮುಂತಾದ ದಾನ ಪ್ರಕಾರಗಳು ನಮ್ಮ ಕಣ್ಮುಂದೆ ಬರುವುದು ಸಹಜ ಆದರೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾನವು ಪ್ರತಿಯೊಬ್ಬ ಪೌರನ ಅತ್ಯಮೂಲ್ಯವಾದ ಮತ್ತು ಸರ್ವಶ್ರೇಷ್ಠವಾದ ಕರ್ತವ್ಯವಾಗಿದೆ. ಮತದಾನದ ಮೂಲಕ ಜನಾಭಿಪ್ರಾಯ ರೂಪುಗೊಳ್ಳುತ್ತದೆ, ಮತದಾನದ ಮೂಲಕ ಸರಕಾರಗಳು ರಚನೆಯಾಗುತ್ತವೆ, ಮತದಾನದ ಮೂಲಕವೇ ಸರಕಾರಗಳು ಬದಲಾಗುತ್ತವೆ. ಆದ್ದರಿಂದ ಮತದಾನವು ಭಾರತದಲ್ಲಿ ಪ್ರತಿಯೊಬ್ಬ ಪ್ರಜೆಗೂ ಪರಮಾಧಿಕಾರವನ್ನು ಹೊಂದುವಂತೆ ಮಾಡಿದೆ. ಚುನಾವಣೆಯ ಸಂದರ್ಭದಲ್ಲಿ ವಿವಿಧ ರಾಜಕೀಯ ಪಕ್ಷಗಳ ನಾಯಕರು ಮತ್ತು ಚುನಾವಣೆಯಲ್ಲಿ ಸ್ಪರ್ಧಿಸಿದ ಅಭ್ಯರ್ಥಿಗಳು ಸಾಮಾನ್ಯ ಜನರ ಬಳಿ ಬಂದು "ಮತದಾರ ಪ್ರಭುಗಳೇ ನನಗೆ ತಮ್ಮ ಸೇವೆ ಮಾಡಲು ಅವಕಾಶ ಮಾಡಿಕೊಡಿ ಮುಂಬರುವ ಚುನಾವಣೆಯಲ್ಲಿ XYZ ಪಕ್ಷದಿಂದ ಸ್ಪರ್ಧಿಸಿದ ನನಗೆ ತಮ್ಮ ಅಮೂಲ್ಯವಾದ ಮತವನ್ನು ನೀಡಿ ಪ್ರಚಂಡ ಬಹುಮತದಿಂದ ಆರಿಸಿ ತರಬೇಕೆಂದು" ಮತದಾರರಲ್ಲಿ ಮತಭಿಕ್ಷೆಯನ್ನು ಬೇಡುವುದು ಸರ್ವೇಸಾಮಾನ್ಯವಾಗಿದೆ. ಇದು ಭಾರತದಲ್ಲಿ ಮತದಾನದ ಪ್ರಾಮುಖ್ಯತೆಯನ್ನು ಪ್ರತಿಬಿಂಬಿಸುತ್ತದೆ.

ಭಾರತವು ಪ್ರಪಂಚದಲ್ಲಿಯೇ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಏಕೆಂದರೆ, ಭಾರತದಲ್ಲಿ ಮತದಾರರ ಸಂಖ್ಯೆ ಅಧಿಕವಾಗಿದೆ. ಇಷ್ಟೊಂದು ಮತದಾರರನ್ನು ಹೊಂದಿದ ಪ್ರಜಾಪ್ರಭುತ್ವ ರಾಷ್ಟ್ರ ಪ್ರಪಂಚದಲ್ಲಿಯೇ ಇರುವುದಿಲ್ಲ. ಭಾರತವು ೧೯೪೭ ಅಗಸ್ಟ ೧೫ ರಂದು ಸ್ವಾತಂತ್ರ್ಯ ಪಡೆದುಕೊಂಡಿತು. ೧೯೫೦ ಜನೇವರಿ ೨೬ ರಂದು ತನಗೆ ಬೇಕಾದ ಸಂವಿಧಾನವನ್ನು ಜಾರಿಗೆ ತಂದು,

ಸಂವಿಧಾನಬದ್ಧ ಪ್ರಜಾಸತ್ತಾತ್ಮಕ ತಳಹದಿಯ ಮೇಲೆ ಆಡಳಿತವನ್ನು ನಡೆಸುತ್ತದೆ. ಭಾತದಲ್ಲಿ ಸಂವಿಧಾನ ಜಾರಿಗೆ ಬಂದ ದಿನವನ್ನು ಗಣರಾಜ್ಯೋತ್ಸವದ ದಿನವನ್ನಾಗಿ ಆಚರಿಸಲಾಗುತ್ತದೆ. ಒಂದು ರಾಷ್ಟ್ರದ ಜನತೆ (ಮತದಾರರು) ಆ ರಾಷ್ಟ್ರದ ಮುಖ್ಯಸ್ಥರನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಮತದಾನದ ಮೂಲಕ ಆಯ್ಕೆ ಮಾಡುವಂತಿದ್ದರೆ ಅದನ್ನು ಗಣರಾಜ್ಯವೆಂದು ಕರೆಯಲಾಗುತ್ತದೆ. ಭಾರತದ ಮುಖ್ಯಸ್ಥರಾದ ರಾಷ್ಟ್ರಪತಿಗಳು ಚುನಾಯಿತ ಪ್ರತಿನಿಧಿಯಾಗಿರುತ್ತಾರೆ. ಪ್ರಜಾಪ್ರಭುತ್ವದಲ್ಲಿ ಮತದಾನದ ಮೌಲ್ಯ:-

ಆಧುನಿಕ ಯುಗವನ್ನು ಪ್ರಜಾಪ್ರಭುತ್ವದ ಯುಗ ಎಂದು ಕರೆಯಲಾಗುತ್ತದೆ. ಏಕೆಂದರೆ, ಪ್ರಜಾಪ್ರಭುತ್ವದಲ್ಲಿ ಸಮಾನತೆ, ಸ್ವಾತಂತ್ರ್ಯ, ಭ್ರಾತೃತ್ವ, ಕಾನೂನು, ನ್ಯಾಯ ಮುಂತಾದ ಮಾನವೀಯ ಮೌಲ್ಯಗಳು ಇರುವುದರಿಂದ ಇತ್ತೀಚಿನ ದಿನಗಳಲ್ಲಿ ಪ್ರಪಂಚದ ಬಹುತೇಕ ರಾಷ್ಟ್ರಗಳು ಪ್ರಜಾಪ್ರಭುತ್ವ ತತ್ವದ ತಳಹದಿಯ ಮೇಲೆ ಸರಕಾರವನ್ನು ರಚಿಸಿಕೊಂಡು ಆಳ್ವಿಕೆಯನ್ನು ಮಾಡುತ್ತವೆ. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭುಗಳು ಆಳುವವರು ಅವರೇ ಮತ್ತು ಆಳಿಸಿಕೊಳ್ಳುವವರೂ ಅವರೇ ಆಗಿರುತ್ತಾರೆ. ಆದ್ದರಿಂದ ಅಬ್ರಹಾಂ ಲಿಂಕನ್‌ರವರು "ಪ್ರಜೆಗಳು ಪ್ರಜೆಗಳಿಂದ ಪ್ರಜೆಗಳಿಗೋಸ್ಕರ ಇರುವ ಸರಕಾರವನ್ನು ಪ್ರಜಾಪ್ರಭುತ್ವ" ಎಂದು ವ್ಯಾಖ್ಯಾನಿಸಿದ್ದಾರೆ. ಪ್ರಜಾಪ್ರಭುತ್ವ ಎಂಬ ಪದವು ಇಂಗ್ಲಿಷನ "Democracy"ಎಂಬ ಪದಕ್ಕೆ ಸಮನಾಗಿದೆ "Democracy" ಎಂಬ ಪದವು ಗ್ರೀಕ್ ಭಾಷೆಯ "Demos" ಮತ್ತು "Kratos" ಎಂಬ ಎರಡು ಪದಗಳಿಂದ ಬಂದಿದೆ. "Demos" ಎಂದರೆ ಜನರು ಮತ್ತು "Kratos" ಎಂದರೆ ಅಧಿಕಾರ ಎಂದಾಗುತ್ತದೆ. ಪ್ರಜಾಪ್ರಭುತ್ವ ಎನ್ನುವುದು ಸಹ ಪ್ರಜಾ ಎಂದರೆ ಜನರು, ಪ್ರಭುತ್ವ ಎಂದರೆ ಅಧಿಕಾರ ಎಂದಾಗುತ್ತದೆ. ಆದ್ದರಿಂದ ಜೇಮ್ಸ್ ಬ್ರೈಸರವರು "ಮತದಾನದ ಮೂಲಕ ತಮ್ಮ ಪರಮಾಧಿಕಾರವನ್ನು ವ್ಯಕ್ತಪಡಿಸುವ ಜನ ಸಮುದಾಯದ ಅಧಿಕಾರವೇ ಪ್ರಜಾಪ್ರಭುತ್ವ" ಎಂದು ಹೇಳಿದ್ದಾರೆ. ಮತದಾನದ ಮೂಲಕ ಒಂದು ರಾಷ್ಟ್ರದಲ್ಲಿ ಸರಕಾರವನ್ನು ರಚಿಸುವ, ಸರಕಾರವನ್ನು ನಿಯಂತ್ರಿಸುವ ಮತ್ತು ಸರಕಾರವನ್ನು ಉಚ್ಚಾಟಿಸುವ ಅಂತಿಮ ಅಧಿಕಾರ ಪ್ರಜೆಗಳು ಹೊಂದಿದ್ದರೆ ಅದನ್ನು ಪ್ರಜಾಪ್ರಭುತ್ವ ಎಂದು ಕರೆಯಲಾಗುತ್ತದೆ. ಪ್ರಜಾಪ್ರಭುತ್ವ ಎಂಬ ಪದವನ್ನು ಮೊಟ್ಟಮದಲಬಾರಿಗೆ ಬಳಸಿದ ಕೀರ್ತಿ ಥುಸಿಡೈಡಸ್ ಅವರಿಗೆ ಸಲ್ಲುತ್ತದೆ. ಅವರು ತಮ್ಮ "The History of Pellopenician war" ಎಂಬ ಕೃತಿಯಲ್ಲಿ ಬಳಸಿದರು.

## ಭಾರತದಲ್ಲಿ ಪ್ರೌಢ ಮತದಾನದ ಪದ್ಧತಿ :

ಭಾರತ ಸಂವಿಧಾನದ ೩೨೬ನೇ ವಿಧಿಯು ಲೋಕಸಭೆ ಮತ್ತು ರಾಜ್ಯ ವಿಧಾನ ಸಭೆಯ ಚುನಾವಣೆಗಳು ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿಯ ಆಧಾರದ ಮೇಲೆ ನಡೆಸಬೇಕೆಂದು ತಿಳಿಸುತ್ತದೆ. ಭಾರತದಲ್ಲಿ ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿಯು ಪ್ರಜೆಗಳು ತಮ್ಮ ಮತದಾನದ ಮೂಲಕ ಸರಕಾರವನ್ನು ರಚಿಸುವ ಮತ್ತು ಉಚ್ಚಾಟಿಸುವ ಮಾಧ್ಯಮವಾಗಿದೆ.



Scanned with OKEN Scanner

ಜಾತಿ, ಧರ್ಮ, ಲಿಂಗ, ವರ್ಣ, ಶಿಕ್ಷಣ, ಅಂತಸ್ತು, ಸಾಮಾಜಿಕ ಸ್ಥಾನಮಾನ ಮುಂತಾದವುಗಳ ಆಧಾರದ ಮೇಲೆ ಯಾವುದೇ ತಾರತಮ್ಯ ಮಾಡದೇ ಕೇವಲ ವಯಸ್ಸಿನ ಆಧಾರದ ಮೇಲೆ ಮತದಾನದ ಹಕ್ಕನ್ನು ಹೊಂದಿರುವುದಕ್ಕೆ ವಯಸ್ಕ ಅಥವಾ ಪ್ರೌಢ ಮತದಾನ ಪದ್ಧತಿ ಎಂದು ಕರೆಯಲಾಗುತ್ತದೆ.

**ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿಯ ಪ್ರಾಮುಖ್ಯತೆ :**

೧) **ಜನತಾ ಪರಮಾಧಿಕಾರವನ್ನು ಎತ್ತಿ ಹಿಡಿಯುತ್ತದೆ :** ಈ ಪದ್ದತಿಯು ಪ್ರಜೆಗಳಿಗೆ ಮತದಾನದ ಹಕ್ಕಿನ ಮೂಲಕ ಸರಕಾವನ್ನು ರಚಿಸುವ ಮತ್ತು ಉಚ್ಚಾಟಿಸುವ ಅಧಿಕಾರವನ್ನು ನೀಡುತ್ತದೆ. ಈ ಪದ್ಧತಿಯಿಂದ ಆಯ್ಕೆಯಾದ ಪ್ರತಿನಿಧಿಗಳು ಪ್ರಜೆಗಳ ಪರವಾಗಿ ಆಡಳಿತ ನಡೆಸುತ್ತಾರೆ. ಆದ್ದರಿಂದ ಇದು ಜನತಾ ಪರಮಾಧಿಕಾರ ಎತ್ತಿ ಹಿಡಿಯುತ್ತದೆ.

೨) **ರಾಜಕೀಯ ಸಮಾನತೆಯನ್ನು ಮೂಡಿಸುತ್ತದೆ :** ವಯಸ್ಕ ಅಥವಾ ಪ್ರೌಢ ಮತದಾನ ಪದ್ದತಿಯು ಯಾವುದೇ ತಾರತಮ್ಯ ಮಾಡದೇ ಎಲ್ಲ ವಯಸ್ಕ ಪ್ರಜೆಗಳಿಗೆ ಮತದಾನದ ಹಕ್ಕನ್ನು ನೀಡುತ್ತದೆ. ಆದ್ದರಿಂದ ಈ ಪದ್ದತಿಯು ರಾಜಕೀಯ ಸಮಾನತೆಯನ್ನು ಮೂಡಿಸುತ್ತದೆ.

೩) **ಸಾಮಾನ್ಯ ಜನರಿಗೆ ರಾಜಕೀಯ ಶಿಕ್ಷಣವನ್ನು ನೀಡುತ್ತದೆ :** ಈ ಪದ್ದತಿಯ ಮೂಲಕ ಜನಸಾಮಾನ್ಯರು ಮತದಾನದ ಹಕ್ಕನ್ನು ಹೊಂದಿರುವದರಿಂದ ವಿವಿಧ ರಾಜಕೀಯ ಪಕ್ಷದ ನಾಯಕರು, ಚುನಾವಣೆಯಲ್ಲಿ, ಸ್ಪರ್ದಿಸಿದ ಅಭ್ಯರ್ಥಿಗಳು ಚುನಾವಣೆಯ ಸಂದರ್ಭದಲ್ಲಿ ಪ್ರಚಾರದ ಮೂಲಕ ರಾಜಕೀಯ ವಿದ್ಯಮಾನಗಳನ್ನು ಜನರಿಗೆ ತಿಳಿಸುತ್ತಾರೆ. ಇದರಿಂದ ಸಾಮಾನ್ಯ ಜನರು ರಾಜಕೀಯ ಶಿಕ್ಷಣ ಹೊಂದುತ್ತಾರೆ.

೪) **ವ್ಯಕ್ತಿಯ ಪ್ರತಿಷ್ಠೆ ಹೆಚ್ಚುತ್ತದೆ :** ಈ ಪದ್ದತಿಯು ಪ್ರತಿಯೊಬ್ಬ ವಯಸ್ಕ ವ್ಯಕ್ತಿಗೂ ಮತದಾನದ ಹಕ್ಕನ್ನು ನೀಡುವದರಿಂದ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ತನ್ನ ರಾಷ್ಟ್ರದ ಆಡಳಿತದಲ್ಲಿ ಭಾಗವಹಿಸುವ ಅವಕಾಶವನ್ನು ಹೊಂದಿರುತ್ತಾನೆ. ಇದರಿಂದ ವ್ಯಕ್ತಿಯ ಪ್ರತಿಷ್ಠೆ ಹೆಚ್ಚಾಗುತ್ತದೆ.

**ಮತದಾರರ ವಯಸ್ಸು :**

ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿಯು ಪ್ರಪಂಚದ ಎಲ್ಲ ಪ್ರಜಾಸತ್ತಾತ್ಮಕ ರಾಷ್ಟ್ರಗಳಲ್ಲಿ ಆಚರಣೆಯಲ್ಲಿದೆ. ಈ ಪದ್ಧತಿಯು ಜಾರಿಯಲ್ಲಿರುವ ರಾಷ್ಟ್ರಗಳಲ್ಲಿ ಒಂದು ನಿರ್ದಿಷ್ಟ ವಯೋಮಾನದ ಎಲ್ಲ ಪ್ರಜೆಗಳು ಮತದಾನದ ಹಕ್ಕನ್ನು ಹೊಂದಿರುತ್ತಾರೆ. ಆದರೆ ಮತದಾನದ ವಯಸ್ಸು ರಾಷ್ಟ್ರದಿಂದ ರಾಷ್ಟ್ರಕ್ಕೆ ಭಿನ್ನವಾಗಿರುತ್ತದೆ. ಭಾರತದಲ್ಲಿ ಮತದಾನದ ವಯಸ್ಸು ೧೮ ವರ್ಷ ಪೂರ್ಣಗೊಂಡಿರಬೇಕು. ೧೯೮೯ ರಲ್ಲಿ ಸಂವಿಧಾನದ ೩೨೬ನೇ ವಿಧಿಯನ್ನು ೬೧ನೇ ತಿದ್ದುಪಡಿಯ ಮೂಲಕ ಮತದಾರರ ವಯಸ್ಸನ್ನು ೨೧ ರಿಂದ ೧೮ಕ್ಕೆ ಇಳಿಸಲಾಯಿತು. ಪ್ರಸ್ತುತ ೧೮ ವರ್ಷ ಪೂರ್ಣಗೊಂಡ ಭಾರತೀಯ ಪೌರರು ಮತದಾನದ ಹಕ್ಕನ್ನು ಹೊಂದಿರುತ್ತಾರೆ.



Scanned with OKEN Scanner

| ಕ್ರ. ಸಂ | ರಾಷ್ಟ್ರದ ಹೆಸರು | ವಯಸ್ಸು | ಕ್ರ. ಸಂ | ರಾಷ್ಟ್ರದ ಹೆಸರು | ವಯಸ್ಸು |
|---|---|---|---|---|---|
| ೧ | ಭಾರತ | ೧೮ | ೧೧ | ಬ್ರೆಜಿಲ್ | ೧೬ |
| ೨ | ಅಮೇರಿಕಾ | ೧೮ | ೧೨ | ಕ್ಯೂಬಾ | ೧೬ |
| ೩ | ಚೀನಾ | ೧೮ | ೧೩ | ಆಸ್ಟ್ರೀಯಾ | ೧೬ |
| ೪ | ಇಂಗ್ಲೆಂಡ | ೧೮ | ೧೪ | ಇಂಡೋನೇಷಿಯಾ | ೧೭ |
| ೫ | ಶ್ರೀಲಂಕಾ | ೧೮ | ೧೫ | ಸುಡಾನ | ೧೭ |
| ೬ | ಬಾಂಗ್ಲಾದೇಶ | ೧೮ | ೧೬ | ಜಪಾನ | ೨೦ |
| ೭ | ನೇಪಾಳ | ೧೮ | ೧೭ | ತೈವಾನ | ೨೦ |
| ೮ | ಪಾಕಿಸ್ತಾನ | ೧೮ | ೧೮ | ಸೌದಿ ಅರೆಬಿಯಾ | ೨೧ |
| ೯ | ಅಫಘಾನಿಸ್ತಾನ | ೧೮ | ೧೯ | ಫಿಜಿ | ೨೧ |
| ೧೦ | ಸ್ವಿಜ್ಜರಲ್ಯಾಂಡ | ೧೮ | ೨೦ | ಮಲೇಶಿಯಾ | ೨೧ |

ವಿವಿಧ ರಾಷ್ಟ್ರಗಳಲ್ಲಿ ನಿಗದಿಪಡಿಸಿದ ಮತದಾನದ ವಯಸ್ಸು

**ಮತದಾರರ ಗುರುತಿನ ಚೀಟಿ** (EPIC)

EPIC ಎಂದರೆ Electors Photo Identity Card ಎಂದರ್ಥ, ಇದನ್ನು ಕನ್ನಡದಲ್ಲಿ ಮತದಾರರ ಗುರುತಿನ ಚೀಟಿ ಎನ್ನುವರು ಭಾರತದಲ್ಲಿ ಮತದಾರರ ಗುರುತಿನ ಚೀಟಿಯನ್ನು ೧೯೯೩ರಲ್ಲಿ ಟಿ.ಎನ್.ಶೇಷನ್ ರವರು ಚುನಾವಣಾ ಅಯೋಗದ ಮುಖ್ಯ ಆಯುಕ್ತರಾಗಿದ್ದಾಗ ಜಾರಿಗೆ ತರಲಾಯಿತು. ಚುನಾವಣೆಗಳ ಸಂದರ್ಭದಲ್ಲಿ ನಕಲಿ ಮತದಾನವನ್ನು ತಡೆಗಟ್ಟಿ ನಿಜವಾದ ಮತದಾರರಿಗೆ ಮತಚಲಾಯಿಸಲು ಅನುಕೂಲವಾಗಲೆಂದು ಚುನಾವಣಾ ಅಯೋಗವು ಮತದಾರರ ಹೆಸರು, ವಿಳಾಸ, ಲಿಂಗ, ವಯಸ್ಸು ಮತ್ತು ಮತದಾರರ ಭಾವಚಿತ್ರವನ್ನೊಳಗೊಂಡಂತೆ ಸಣ್ಣದಾದ ಚೀಟಿಯನ್ನು ಮತದಾರರಿಗೆ ವಿತರಿಸಲಾಗುತ್ತದೆ. ಇದಕ್ಕೆ ಮತದಾರರ ಗುರುತಿನ ಚೀಟಿ (EPIC) ಎಂದು ಕರೆಯಲಾಗುತ್ತದೆ. ಚುನಾವಣೆಯ ಸಂದರ್ಭದಲ್ಲಿ ಮತದಾರರು ಮತದಾನ ಮಾಡುವಾಗ ಗುರುತಿನ ಚೀಟಿ ಹಾಜರುಪಡಿಸುವುದನ್ನು ಕಡ್ಡಾಯ ಮಾಡಲಾಯಿತು, ಆದರೆ ಚುನಾವಣಾ ಆಯೋಗ ಎಲ್ಲಾ ಮತದಾರರಿಗೂ ಗುರುತಿನ ಚೀಟಿ ವಿತರಿಸುವುದು ಅಸಾಧ್ಯವಾಯಿತು. ಅಲ್ಲದೆ ಗುರುತಿನ ಚೀಟಿ ಹೊಂದಿದ ಬಡವರು, ಅನಕ್ಷರಸ್ಥರು, ಕಾರ್ಮಿಕರು, ರೈತರು ಮತ್ತು ಗುಳೆಹೋಗುವವರು ಈ ಸಣ್ಣದಾದ ಗುರುತಿನ ಚೀಟಿ ಸಂರಕ್ಷಿಸಿಕೊಳ್ಳುವುದು ಕಷ್ಟವಾಯಿತು ಏಕೆಂದರೆ, ನೆರೆಹಾವಳಿ, ಬಡತನ, ಬರಗಾಲ ಮತ್ತಿತರ ಕಾರಣಗಳಿಂದ ಜನ ಸಾಮನ್ಯರು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಗುಳೆಹೊಗುವುದು ಅನಿವಾರ್ಯವಾಗಿದೆ. ಇಂತಹ ಸಂದರ್ಭಗಳಲ್ಲಿ ಜನರು ತಮ್ಮ ಜೀವ ಉಳಿಸಿ ಕೊಳ್ಳುವುದೇ ಒಂದು ದೊಡ್ಡ ಸಾಹಸವೆನಿಸುತ್ತದೆ. ಇನ್ನು



Scanned with OKEN Scanner

ಸಣ್ಣದಾದ ಮತದರಾರ ಗುರುತಿನ ಚೀಟಿಯ ಪಡೆದು ಅದನ್ನು ಸಂರಕ್ಷಿಸಿಕೊಳ್ಳವುದು ಕಷ್ಟವಾಯಿತು ಇದರಿಂದ ಮತದಾನದ ಸಂದರ್ಭದಲ್ಲಿ ಗುರುತಿನ ಚೀಟಿಯನ್ನು ಕಡ್ಡಾಯಾಗಿ ಹಾಜರ ಪಡಿಸುವ ನಿಯಮವನ್ನು ಸಡಿಲಿಸಲಾಯಿತು ಪ್ರಸ್ತುತ ಮತದಾರರು ಮತದಾನ ಮಾಡುವಾಗ ಮತದಾರರ ಭಾವಚಿತ್ರ ಇರುವ ಚುನಾವಣಾ ಆಯೋಗವು ನಿಗದಿಪಡಿಸಿದ ೧೪ ದಾಖಲೆಗಳಲ್ಲಿ ಯಾವುದಾದರೊಂದನ್ನು ಹಾಜರುಪಡೆಸುವುದರ ಮೂಲಕ ಮತಚಲಾಯಿಸಬಹುದಾಗಿದೆ.

### ಮತದಾರರ ಗುರುತಿನ ಚೀಟಿ (EPIC)ಯ ಅನುಕೂಲಗಳು

೧) ಮತದಾರರ ಗುರುತಿನ ಚೀಟಿಯು ನಕಲಿ ಮತದಾನವನ್ನು ತಡೆಗಟ್ಟುತ್ತದೆ.

೨) ನಿಜವಾದ ಮತದಾರರಿಗೆ ಮತ ಚಲಾಯಿಸಲು ಅವಕಾಶ ನೀಡುತ್ತದೆ.

೩) ಸರಕಾರದ ವಿವಿಧ ಯೋಜನಗಳ ಲಾಭ ಪಡೆದುಕೊಳ್ಳಲು ಸಹಾಯಕ.

೪) ಬ್ಯಾಂಕ ಪಾಸಬುಕ್, ಡ್ರಾವಿಂಗ ಲೈಸೆನ್ಸ, ಪಾಸಪೋರ್ಟ, ಪಾನಕಾರ್ಡ ಹೊಂದಲು ಅನುಕೂಲ

೫) ನಗರ ಪ್ರದೇಶದಲ್ಲಿ ವಸತಿ ನಿಲಯ (Lodging) ಪಡೆದುಕೊಳ್ಳಲು ಅನುಕೂಲ

೬) ಪರಸ್ಥಳಗಲ್ಲಿ ಅಂರ್ತಜಾಲ (Internet) ಬಳಕೆಮಾಡಲು ಉಪಯುಕ್ತ.

೭) ಮೊಬೆಲ್ ಸಿಮ್ ಕಾರ್ಡ ಪಡೆದುಕೊಳ್ಳಲು ಅವಶ್ಯಕ.

೮) ಭಾರತೀಯ ಪ್ರಜೆ ಎಂದು ಹೇಳಿಕೊಳ್ಳಲು ಸಹಾಯಕ.

### ವಿದ್ಯುನ್ಮಾನ ಮತಯಂತ್ರ (EVM)

EVM ಎಂದರೆ Electronic Voting Machine ಎಂದರ್ಥ ಇದನ್ನು ಕನ್ನಡಲ್ಲಿ ವಿದ್ಯುನ್ಮಾನ ಮತಯಂತ್ರ ಎಂದು ಕರೆಯಲಾಗುತ್ತದೆ. ಭಾರತದ ಚುನಾವಣಾ ಅಯೋಗದ ಸುಧಾರಣೆಗಳಲ್ಲಿ ಇವು ಮಹತ್ವದ ಅವಿಷ್ಕಾರವಾಗಿದೆ, ಭಾರತದಲ್ಲಿ ವಿದ್ಯುನ್ಮಾನ ಮತಯಂತ್ರಗಳನ್ನು ೧೯೯೮ ರಲ್ಲಿ ರಾಜಸ್ಥಾನ, ಮಧ್ಯಪ್ರದೇಶ ಮತ್ತು ದೆಹಲಿಯ ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರಥಮ ಬಾರಿಗೆ ಬಳಸಲಾಯಿತು. ಇದಕ್ಕೆ ಸಾರ್ವಜನಿಕರು ಉತ್ತಮ ಪ್ರತಿಕ್ರಿಯೆ ನೀಡಿರುವುದರಿಂದ ೧೯೯೯ ರಲ್ಲಿ ಗೋವಾ ವಿಧಾನ ಸಭಾ ಚುನಾವಣೆಯಲ್ಲಿ ಇದನ್ನು ಬಳಸಲಾಯಿತು. ನಂತರ ೨೦೦೪, ೨೦೦೯, ೨೦೧೪ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಗಳಲ್ಲಿ ವಿದ್ಯುನ್ಮಾನ ಮತಯಂತ್ರವನ್ನು ರಾಷ್ಟ್ರದಾದ್ಯಂತ ಬಳಸಲಾಯಿತು.

ವಿದ್ಯುನ್ಮಾನ ಮತಯಂತ್ರವು ಕಂಟ್ರೋಲಿಂಗ ಯುನಿಟ್ ಮತ್ತು ಬ್ಯಾಲೆಟಿಂಗ್ ಯುನಿಟ್ ಎಂಬ ಎರಡು ವಿದ್ಯುನ್ಮಾನ ಉಪಕರಣಗಳಿಂದ ಕೂಡಿರುತ್ತದೆ. ಬ್ಯಾಲೆಟಿಂಗ್ ಯುನಿಟ್‌ವು ಮತದಾರರು ಮತ ಚಲಾಯಿಸುವ ಸ್ಥಳದಲ್ಲಿರುತ್ತದೆ ಮತ್ತು ಕಂಟ್ರೋಲಿಂಗ್ ಯುನಿಟ್ ಚುನಾವಣಾ ಸಿಬ್ಬಂದಿಯ ಬಳಿಯಿರುತ್ತದೆ. ಎರಡರ ನಡುವೆ ಬ್ಯಾಟರಿ

ಚಾಲಿತ ಸಂಪರ್ಕ ಕಲ್ಪಿಸಲಾಗುತ್ತದೆ. ಬ್ಯಾಲೆಟಿಂಗ್ ಯುನಿಟ್‌ನಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸಿದ ಅಭ್ಯರ್ಥಿಗಳ ಹೆಸರು ಅವರ ಗುರುತಿನ ಚಿನ್ಹೆ ಮತ್ತು ಮತಚಲಾಯಿಸುವ ಬಟನನ್ನು ವ್ಯವಸ್ಥೆಗೊಳಿಸಲಾಗಿರುತ್ತದೆ. ಮತದಾರರು ತಮಗೆ ಬೇಕಾದ ಅಭ್ಯರ್ಥಿಯ ಹೆಸರು, ಚಿನ್ಹೆಯ ಮುಂದೆ ಜೋಡಿಸಲಾದ ಬಟನ್ ಒತ್ತುವುದರ ಮೂಲಕ ಮತ ಚಲಾಯಿಸಬಹುದಾಗಿದೆ.

**ವಿದ್ಯುನ್ಮಾನ ಮತಯಂತ್ರದ ಉಪಯೋಗಗಳು :**

**೧) ಮಿತವ್ಯಯ ಮತ್ತು ಪರಿಸರ ಸ್ನೇಹಿಯಾಗಿರುತ್ತದೆ :** EVM ಬಳಕೆಯಿಂದ ಮತಪತ್ರಕ್ಕೆ ಬಳಸುವ ಸಾವಿರಾರು ಟನ್ ಕಾಗದ ಉಳಿತಾಯವಾಗುತ್ತದೆ. ಇದರಿಂದ ಹಣ ಉಳಿತಾಯವಾಗುವುದರ ಜೊತೆಗೆ ಪರಿಸರ ಸಂರಕ್ಷಣೆ ಸಾಧ್ಯವಾಗುತ್ತದೆ.

**೨) ಶೀಘ್ರ ಮತ್ತು ಸುಲಭವಾಗಿ ಮತ ಚಲಾಯಿಸಬಹುದು :** EVM ಬಳಕೆಯಿಂದ ಪ್ರತಿ ೫ ಸೆಕೆಂಡಿಗೆ ಒಬ್ಬರಂತೆ ಮತ ಚಲಾಯಿಸಬಹುದು ಮತ್ತು ಅಕ್ಷರಸ್ಥರು, ಅನಕ್ಷರಸ್ಥರು ಸುಲಭವಾಗಿ ಮತ ಚಲಾಯಿಸಬಹುದಾಗಿದೆ. ಇದರಿಂದ ಮತದಾರರ ಸರದಿ ಸಾಲುಗಳನ್ನು ತಪ್ಪಿಸುತ್ತದೆ.

**೩) ಶೀಘ್ರ ಮತ್ತು ಸ್ಪಷ್ಟ ಪಲಿತಾಂಶವನ್ನು ಬಡೆಯಬಹುದು :** EVM ಬಳಕೆಯಿಂದ ಮತಪತ್ರಗಳ ಎಣಿಕೆಯ ಗೊಂದಲ ಇರುವುದಿಲ್ಲ. ವಿದ್ಯುನ್ಮಾನ ಮತಯಂತ್ರದಲ್ಲಿರುವ ಬಟನ್ ಉಪಯೋಗಿಸಿ ಯಾರಿಗೆ ಎಷ್ಟು ಮತ ಚಲಾವಣೆಯಾಗಿದೆ ಎಂದು ಸುಲಭವಾಗಿ ತಿಳಿದುಕೊಳ್ಳಬಹುದು. ಇದರಿಂದ ಅಭ್ಯರ್ಥಿಗಳು ಫಲಿತಾಂಶಕ್ಕಾಗಿ ದಿನವಿಡೀ ಕಾಯುವ ಅವಶ್ಯಕತೆ ಇರುವದಿಲ್ಲ.

**೪) ಏಕ ವ್ಯಕ್ತಿ ಏಕ ಮತ ಪಾಲನೆಯಾಗುತ್ತದೆ :** ಮತದಾನದ ಸಮಯದಲ್ಲಿ EVM ಬಳಕೆಯಿಂದ ಯಾವುದೇ ಒಬ್ಬ ವ್ಯಕ್ತಿ ಒಂದಕ್ಕಿಂತ ಹೆಚ್ಚು ಮತ ಹಾಕಲು ಅವಕಾಶವಿರುವದಿಲ್ಲ ಮತ್ತು ಮತದಾನದ ದುರ್ಬಳಕೆಯು ಆಗುವುದಿಲ್ಲ ಇದರಿಂದ ಒಬ್ಬ ವ್ಯಕ್ತಿಗೆ ಒಂದು ಮತ ಚಲಾಯಿಸುವ ತತ್ವ ಪರಿಪಾಲನೆಯಾಗುತ್ತದೆ.

**೫) ಕುಲಗೆಟ್ಟ ಮತಗಳನ್ನು ತಡೆಯಬಹುದು :** ಮತಪತ್ರಗಳ ಬಳಕೆಯಲ್ಲಿ ಮತದಾರರು ಮತಚಲಾಯಿಸುವ ಸಂದರ್ಭದಲ್ಲಿ ಇಬ್ಬರು ಅಭ್ಯರ್ಥಿಗಳ ಮಧ್ಯ ಮುದ್ರೆಹಾಕಿದಾಗ ಅಥವಾ ಮತದಾರರು ಮತ ಪತ್ರವನ್ನು ಕ್ರಮಬದ್ಧವಾಗಿ ಮಡಚದಿದ್ದರೆ ಅವುಗಳು ಕುಲಗೆಟ್ಟ ಮತಗಳೆಂದು ತಿರಸ್ಕರಿಸಬಹುದು ಆದರೆ, EVMದ ಬಳಕೆಯಿಂದ ಕುಲಗೆಟ್ಟ ಮತಗಳ ಚಲಾವಣೆ ತಪ್ಪಿಸಬಹುದು.

**ಮೇಲಿನ ಯಾರು ಅಲ್ಲ (ನೋಟಾ) :**

NOTA ಎಂದರೆ, None of The Above ಎಂದರ್ಥ ಇದನ್ನು ಕನ್ನಡದಲ್ಲಿ ಮೇಲಿನ ಯಾರು ನನ್ನ ಆಯ್ಕೆ ಅಲ್ಲ ಎಂದಾಗುತ್ತದೆ. ಭಾರತದಲ್ಲಿ NOTA ಮತಚಲಾಯಿಸುವುದನ್ನು ೨೦೧೩ರಲ್ಲಿ ಪ್ರಥಮಬಾರಿಗೆ ಬಳಸಲಾಯಿತು. ಸಪ್ಟಂಬರ್

೨೭. ೨೦೧೩ರಂದು ಭಾರತದ ಸರ್ವೋಚ್ಚನ್ಯಾಯಲಯದ ಆದೇಶದಂತೆ ಕೇಂದ್ರ ಚುನಾವಣಾ ಅಯೋಗವು ವಿದ್ಯುನ್ಮಾನ ಮತಯಂತ್ರ (EVM) ಕ್ಕೆ ಓಔಖಿಂ ಅಳವಡಿಸಿ ೨೦೧೩ ರಲ್ಲಿ ಐದು ರಾಜ್ಯಗಳ ವಿಧಾನಸಭಾ ಚುನಾವಣೆಗಳನ್ನು ನಡೆಸಿತ್ತು ೨೦೧೪ರ ಲೋಕಸಭೆಯ ಸಾರ್ವತ್ರಿಕ ಚುನಾವಣೆಯಲ್ಲಿ ಮೊದಲಬಾರಿಗೆ (NOTA) None of The Above ಬಟನ್ ವಿದ್ಯುನ್ಮಾನ ಮತಯಂತ್ರ (EVM) ಕ್ಕೆ ಅಳವಡಿಸಿ. ಮತದಾರರಿಗೆ ನಕಾರಾತ್ಮಕ ಮತದಾನ ಮಾಡಲು ಅವಕಾಶವನ್ನು ಕಲ್ಪಿಸಲಾಗಿದೆ.

## ನೋಟಾದ ಉಪಯುಕ್ತತೆ

೧) ಮತದಾರರು ಚುನಾವಣೆಯಲ್ಲಿ ಸ್ಪರ್ಧಿಸಿದ ಯಾವ ಒಬ್ಬ ಅಭ್ಯರ್ಥಿಯು ಉತ್ತಮವಾಗಿಲ್ಲದಿದ್ದರೆ ನೋಟಾ ಮತ ಚಲಾಯಿಸಬಹುದು.

೨) ಚುನಾವಣೆಯ ಸಂದರ್ಭದಲ್ಲಿ ಓಟಿಗಾಗಿ ನೋಟು ಕೊಡುವ, ಬಣ್ಣದ ಮಾತುಗಳಾಡುವ, ಸುಳ್ಳು ಆಶ್ವಾಸನೆ ನೀಡಿ ಆಮಿಷಗಳಿಗೆ ಆಕರ್ಷಿಸಿಕೊಳ್ಳುವ ಅಭ್ಯರ್ಥಿಯಾಗಿದ್ದರೆ, ಮತ್ತು ಉಳಿದ ಅಭ್ಯರ್ಥಿಗಳು ಹಾಗೆಯೇ ಕಂಡುಬಂದರೆ ಮತದಾರರು ನೋಟಾ ಮತ ಚಲಾಯಿಸಬಹುದು.

೩) ಚುನಾವಣೆಯಲ್ಲಿ ಅಲ್ಪ ಮತಗಳಿಂದ ವಿಜೇತ ಅಭ್ಯರ್ಥಿಯು ಓಔಖಿಂ ಮತಗಳು ಪರಾಜಿತ ಅಭ್ಯಥಿಯ ಪಾಲಾಗಿದ್ದರೆ ನನ್ನ ಪರಿಸ್ಥಿತಿ ಏನಾಗುತ್ತಿತ್ತು ಎಂದು ತಿಳಿದುಕೊಳ್ಳುವದು.

೪) ಚುಣಾವಣೆಯ ಸಂದರ್ಭದಲ್ಲಿ ಚಲಾಯಿಸಿದ ಮತಗಳಲ್ಲಿ ನೋಟಾ ಮತಗಳು ಅಧಿಕವಾಗಿದ್ದರೆ, ವಿಜೇತ ಅಭ್ಯರ್ಥಿ ನಾನು ನಿಜವಾದ ಜನಪ್ರತಿನಿಧಿ ಅಲ್ಲ ಎಂದು ಭಾವಿಸಿಕೊಳ್ಳುವದು.

## ಭಾರತದಲ್ಲಿ ಮತದಾರರ ದಿನ (ಜನೇವರಿ ೨೫) :

ಭಾರತದಲ್ಲಿ ಮತದಾರರ ಸಂಖ್ಯೆ ಹೆಚ್ಚಿರುವದರಿಂದಲೇ ಭಾರತವು ಪ್ರಪಂಚದಲ್ಲೆ ಅತ್ಯಂತ ದೊಡ್ಡ ಪ್ರಜಾಸತಾತ್ಮಕ ರಾಷ್ಟ್ರ ಎಂದು ಕರೆಯಲಾಗುತ್ತದೆ. ಭಾರತವು ಒಂದು ಉತ್ತಮ ಪ್ರಾತಿನಿಧಿಕ ಪ್ರಜಾಸತಾತ್ಮಕ ರಾಷ್ಟ್ರವಾಗಿದೆ. ಪ್ರಾತಿನಿಧಿಕ ಪ್ರಜಾಪ್ರಭುತ್ವದಲ್ಲಿ ಚುನಾವಣೆಗಳು ಅನಿವಾರ್ಯವಾಗಿವೆ. ಚುನಾವಣೆಗಳಿಲ್ಲದೆ ಪ್ರಾತಿನಿಧಿಕ ಪ್ರಜಾಪ್ರಭುತ್ವವನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ಪ್ರಜೆಗಳು ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡಿಕೊಳ್ಳುವ ವಿಧಾನವನ್ನು ಚುನಾವಣೆ ಎಂದು ಕರೆಯಲಾಗುತ್ತದೆ. ಚುನಾವಣೆ ಎಂಬ ಎಂಬ ಪದವು ಇಂಗ್ಲೀಷನಲ್ಲಿ Election ಮತ್ತು ಹಿಂದಿಯಲ್ಲಿ 'ಚುನಾವ್' ಎಂಬ ಪದಕ್ಕೆ ಸಮನಾಗಿದೆ. ಚುನಾವಣೆ ಎಂಬ ಪದವು ಲ್ಯಾಟೀನ್ ಪದ Eligere ಎಂಬ ಮೂಲ ಪದದಿಂದ ಬಂದಿದೆ. Eligere ಎಂದರೆ ಆರಿಸು, ಆಯ್ಕೆಮಾಡು ಎಂದಾಗುತ್ತದೆ. ಆದ್ದರಿಂದ ನಮ್ಮನ್ನಾಳುವ ಪ್ರತಿನಿಧಿಗಳನ್ನು ಮತದಾನದ ಮೂಲಕ ಆಯ್ಕೆ ಮಾಡಿಕೊಳ್ಳುವ ವಿಧಾನವನ್ನು ಚುನಾವಣೆ ಎಂದು ಕರೆಯುತ್ತಾರೆ. ಭಾರತದಲ್ಲಿ ಸಾರ್ವತ್ರಿಕ ಚುನಾವಣೆ,

ಮಧ್ಯಂತರ ಚುನಾವಣೆ, ಉಪ ಚುನಾವಣೆ, ಮರು ಚುನಾವಣೆ ಎಂದು ಹಲವು ಚುನಾವಣೆಗಳನ್ನು ನಡೆಸಲಾಗುತ್ತದೆ.

ನಮ್ಮ ಸಂವಿಧಾನದ ನಿರ್ಮಾಪಕರು ಭಾರತದಲ್ಲಿ ನಿರ್ಭೀತ ಮತ್ತು ಸ್ವತಂತ್ರವಾಗಿ ಚುನಾವಣೆಗಳನ್ನು ನಡೆಸುವ ಉದ್ದೇಶದಿಂದ ಸಂವಿಧಾನದ ೩೨೪ನೇ ವಿಧಿಯ ಪ್ರಕಾರ ಚುನಾವಣಾ ಆಯೋಗದ ರಚನೆಗೆ ಅವಕಾಶ ಮಾಡಿಕೊಟ್ಟಿದೆ. ಆದ್ದರಿಂದ ಭಾರತದ ಚುನಾವಣಾ ಆಯೋಗವು ಒಂದು ಸಂವಿಧಾನಾತ್ಮಕ ಸಂಸ್ಥೆಯಾಗಿದ್ದು, ಸಂಸತ್ತಿನ ರಾಜ್ಯಸಭೆ, ಲೋಕಸಭೆ, ಶಾಸನಸಭೆಗಳಾದ ವಿಧಾನಸಭೆ, ವಿಧಾನಪರಿಷತ್ತು, ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿಗಳನ್ನು ಆಯ್ಕೆ ಮಾಡಲು ಚುನಾವಣೆಗಳನ್ನು ನಡೆಸುವ ಜವಾಬ್ದಾರಿಯನ್ನು ಹೊಂದಿದೆ.

ಭಾರತದಲ್ಲಿ ಚುನಾವಣಾ ಆಯೋಗವು ೧೯೫೦ ಜನೇವರಿ ೨೫ರಂದು ಅಸ್ತಿತ್ವಕ್ಕೆ ಬಂದಿದೆ. ಪ್ರಾರಂಭದಲ್ಲಿ ಏಕಸದಸ್ಯ ಆಯೋಗವಾಗಿತ್ತು. ಆದರೆ ೧೯೯೩ ರಿಂದ ಅದು ತ್ರಿಸದಸ್ಯ ಆಯೋಗವಾಗಿ ಮಾರ್ಪಟ್ಟಿದೆ. ಭಾರತದಲ್ಲಿ ಚುನಾವಣಾ ಆಯೋಗದ ಸ್ಥಾಪನೆಯ ಸವಿನೆನಪಿಗಾಗಿ ಪ್ರತಿವರ್ಷ ಜನೇವರಿ ೨೫ರಂದು ಮತದಾರರ ದಿನವನ್ನಾಗಿ ಆಚರಿಸಲಾಗುತ್ತದೆ.

## ಭಾರತದಲ್ಲಿ ಮತದಾರರ ದಿನಾಚರಣೆಯ ಮಹತ್ವ

* ಮತದಾನವು ಪ್ರತಿಯೊಬ್ಬ ಪ್ರಜೆಯ ರಾಜಕೀಯ ಹಕ್ಕು ಎಂದು ಮನವರಿಕೆ ಮಾಡುವುದು.
* ಸಾಮನ್ಯ ಜನರಿಗೆ ಮತದಾನದ ಮೌಲ್ಯದ ಬಗ್ಗೆ ತಿಳಿವಳಿಕೆ ಮೂಡಿಸುವುದು.
* ಮತದಾನದ ಮೂಲಕ ಉತ್ತಮ ಪ್ರತಿನಿಧಿಗಳನ್ನು ಆಯ್ಕೆ ಮಾಡಿದರೆ ಉತ್ತಮ ಸರ್ಕಾರ ನಿರ್ಮಾಣವಾಗುತ್ತದೆ ಎಂದು ತಿಳಿವಳಿಕೆ ನೀಡುವದು.
* ಮತದಾನದ ದುರ್ಬಳಕೆಯನ್ನು ತಡೆಗಟ್ಟಿ ನಿಜವಾದ ಮತದಾರರು ಮತ ಚಲಾಯಿಸುವಂತೆ ಪ್ರೇರೆಪಿಸುತ್ತದೆ.
* ೧೮ ವರ್ಷ ಪೂರ್ಣಗೊಂಡ ಭಾರತೀಯ ಪೌರರು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಂಡು ಭಾರತದ ರಾಜಕೀಯ ವ್ಯವಸ್ಥೆಯಲ್ಲಿ ಭಾಗವಹಿಸುವದು.

## ಉಪಸಂಹಾರ

ಭಾರತದಲ್ಲಿ ೧೮ ವರ್ಷ ಪೂರ್ಣಗೊಂಡ ಎಲ್ಲಾ ಪೌರರಿಗೂ ಸಮಾನತೆಯ ತತ್ವದ ತಳಹದಿಯ ಮೇಲೆ ಮತದಾನದ ಹಕ್ಕನ್ನು ನೀಡಲಾಗಿದೆ. ಚುನಾವಣೆಯ ಸಂದರ್ಭದಲ್ಲಿ ಮತದಾರರು ಯಾವುದೇ ಆಮಿಷಗಳಿಗೆ ಒಳಗಾಗದೇ ನಿರ್ಭೀತಿಯಿಂದ ತಮ್ಮ ಮತ ಚಲಾಯಿಸುವುದರ ಮೂಲಕ ಭಾರತದ ಪ್ರಜಾಪ್ರಭುತ್ವದಲ್ಲಿ ಸಕ್ರಿಯವಾಗಿ ಭಾಗವಹಿಸಬೇಕೆಂಬುದು ನಮ್ಮ ಸಂವಿಧಾನ ನಿರ್ಮಾಪಕರ ಆಶಯವಾಗಿದೆ. ಆದರೆ



Scanned with OKEN Scanner

ನಮ್ಮ ಸಂವಿಧಾನ ಜಾರಿಗೆ ಬಂದು ೬.೮ ದಶಕಗಳು ಕಳೆದರೂ ಮತದಾನದ ಬಗ್ಗೆ ಪ್ರಜೆಗಳಿಗೆ ನಿರಾಸಕ್ತಿಯಿದೆ. ಚುನಾವಣೆಯ ಸಂದರ್ಭದಲ್ಲಿ ತೋಳ್ಬಲ ಮತ್ತು ಹಣಬಲ ಬಹುಮುಖ್ಯ ಪಾತ್ರ ನಿರ್ವಹಿಸುತ್ತದೆ. ಮತದಾರರು ಜಾತಿ, ಧರ್ಮ, ಹಣ, ಅಧಿಕಾರ, ಮತ್ತು ಇತರೆ ಆಮಿಷಗಳ ಪ್ರಭಾವಕ್ಕೆ ಒಳಗಾಗುತ್ತಿದ್ದಾರೆ. ಇದು ಭಾರತೀಯ ಪ್ರಜಾಪ್ರಭುತ್ವಕ್ಕೆ ಬಹುದೊಡ್ಡ ಸವಾಲಾಗಿದೆ.

ಭಾರತವು ವಿಭಿನ್ನ ಧರ್ಮ, ಜಾತಿ, ಮತ, ಪಂಥ, ಭಾಷೆ, ಸಂಸ್ಕೃತಿಯನ್ನೊಳಗೊಂಡು ವೈವಿದ್ಯಮಯವಾಗಿದೆ. ಇಂತಹ ವೈವಿಧ್ಯತೆಯಲ್ಲಿ ಐಕ್ಯತೆಯನ್ನು ಮೂಡಿಸುವುದೇ ಭಾರತ ಸಂವಿಧಾನದ ಉದ್ದೇಶವಾಗಿದೆ. ಆದ್ದರಿಂದ ನಮ್ಮ ಸಂವಿಧಾನದ ನಿರ್ಮಾಪಕರಾದ ಡಾ॥ ಬಿ.ಆರ್. ಅಂಬೇಡ್ಕರರವರು 'ಭಾರತದ ಸಮ್ಮಿಶ್ರ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಕಾಪಾಡಿಕೊಂಡು ಹೋಗಲು ಜಾತ್ಯತೀತ ತತ್ವದ ಪರಿಪಾಲನೆ ಮತ್ತು ರಾಷ್ಟ್ರೀಯ ಭಾವೈಕ್ಯತೆಯನ್ನು ಮೂಡಿಸುವ ಅವಶ್ಯಕತೆಯನ್ನು ಒತ್ತಿ ಹೇಳಿದ್ದಾರೆ'.

ಭಾರತದ ಪ್ರಜಾಪ್ರಭುತ್ವದಲ್ಲಿ ಮತದಾರರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಪ್ರಜಾಪ್ರಭುತ್ವದ ಯಶಸ್ಸು ಪ್ರಜ್ಞಾವಂತ ಮತದಾರರನ್ನು ಅವಲಂಬಿಸಿದೆ. ಮತದಾರರು ತಮ್ಮ ಮತದ ಮೌಲ್ಯ ಅರಿತುಕೊಂಡು ಯಾವುದೇ ಆಮಿಷಗಳಿಗೆ ಒಳಗಾಗದೇ ೧೦೦ಕ್ಕೆ ಪ್ರತಿಶತ ೯೯ರಷ್ಟು ಮತದಾನವಾದಾಗ ಭಾರತವು ವಿಶ್ವದಲ್ಲಿಯೇ ಅತ್ಯಂತ ದೊಡ್ಡ ಮತ್ತು ಬಲಿಷ್ಠ ಪ್ರಜಾಪ್ರಭುತ್ವ ರಾಷ್ಟ್ರವಾಗುವದರಲ್ಲಿ ಸಂದೇಹವಿಲ್ಲ.

### ಆಕರ ಗ್ರಂಥಗಳು


೧ Indian Polity – M Laxmikanth

೨ ಪ್ರಮುಖ ರಾಜಕೀಯ ಸಿದ್ಧಾಂತಗಳು– ಜಿ.ಆರ್. ಪೂರ್ಣಿಮಾ, ಎಮ್.ಎನ್. ಸುರೇಶಕುಮಾರ

೩ ತುಲನಾತ್ಮಕ ಸರಕಾರ ಮತ್ತು ರಾಜಕೀಯ – ಡಾ॥ ಎಮ್.ಎಸ್. ಪಾಟೀಲ

೪ ಭಾರತದ ರಾಜಕೀಯ ಪ್ರಕ್ರಿಯೆಗಳು ಮತ್ತು ಸಂಸ್ಥೆಗಳು – ಬಿ.ವಾಯ್. ಕೆಳಗಿನಮನಿ

೫ ಭಾರತದ ಸಂವಿಧಾನ – ಡಾ॥ ರಾಜೇಂದ್ರ ದೊಡಮನಿ

೬ ರಾಜಕೀಯ ಚಿಂತಕರು, ವಿದ್ಯಮಾನಗಳು ಮತ್ತು ಪ್ರಕ್ರಿಯೆಗಳು – ಪಿ.ಎಸ್. ಗಂಗಾಧರ

೭ ಸ್ಪರ್ಧಾ ವಿಜೇತ ಮಾಸಪತ್ರಿಕೆ

೮ ಸ್ಪರ್ಧಾ ಸ್ಫೂರ್ತಿ ಮಾಸಪತ್ರಿಕೆ


◆◆◆



Scanned with OKEN Scanner



ಆಧುನಿಕ ಕರ್ನಾಟಕದ ಪುನರುಜ್ಜೀವನದ ಸಮಯದಲ್ಲಿ ಲಿಂಗಾಯತ ಸಮಾಜ ಶೈಕ್ಷಣಿಕವಾಗಿ ಕೈಕೊಂಡ ಕಾರ್ಯ ಐತಿಹಾಸಿಕವಾದುದು. ಅದರಲ್ಲಿ ತ್ಯಾಗವೀರ ಶಿರಸಂಗಿ ಲಿಂಗರಾಜರು ತಮ್ಮ ಸಂಸ್ಥಾನದ ಸಮಸ್ತ ಆಸ್ತಿಯನ್ನು ತಮ್ಮ ಮೃತ್ಯುಪತ್ರದ ಮೂಲಕ ನಾಡಿನ ಶಿಕ್ಷಣದ ಅಭಿವೃದ್ಧಿಗಾಗಿ ದಾನ ಮಾಡಿದುದು ಒಂದು ದೊಡ್ಡ ಇತಿಹಾಸ ! ಇಂದು ನಾಡಿನ ಎಲ್ಲ ಕ್ಷೇತ್ರದಲ್ಲಿ ಪ್ರಮುಖರೆನಿಸಿದ ಡಾ. ಎಂ.ಸಿ. ಮೋದಿ ರ್‍ಯಾಂಗ್ಲರ್ ಡಿ.ಸಿ. ಪಾವಟೆ ಬಿ.ಡಿ. ಜತ್ತಿಯಂತಹ ಅಸಂಖ್ಯ ಜನಗಳ ಬಾಳಿಗೆ ವಿದ್ಯೆಯ ಬೆಳಕನಿತ್ತವರು ಶಿರಸಂಗಿ ಲಿಂಗರಾಜರು.

ಅವರ ನಂತರ ಕಳೆದ ಶತಕದಲ್ಲಿ ಬಸವಾಯತರಾದ ಪೂಜ್ಯ ಬಂಥನಾಳ ಸಂಗನಬಸವ ಶಿವಯೋಗಿಗಳ ಪ್ರೇರಣೆ ಕಾರಣವಾಗಿ, ತಮ್ಮ ಸಮಸ್ತ ಆಸ್ತಿಯನ್ನು ನಾಡಿನ ಶಿಕ್ಷಣದ ಉನ್ನತಿಗೆ ದಾನವಿತ್ತ ಮಾತೋಶ್ರೀ ಗಂಗಮ್ಮ ವೀರಪ್ಪ ಚಿನಿವಾರ ಹೆಸರು ಚಿರಸ್ಮರಣೀಯ. ಇಂದು ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ಭಾಗದ ಸಹಸ್ರಾರು ಮಕ್ಕಳು ವಿದ್ಯೆಯ ಬೆಳಕನ್ನು ಪಡೆದು ನಾಡಿನ ಉನ್ನತಿಗೆ ಕಾರಣರಾದುದು ಮಾತೋಶ್ರೀ ಗಂಗಮ್ಮ ಚಿನಿವಾರ ಶಿಕ್ಷಣ ಸಂಸ್ಥೆಗಳಿಂದ.

ಈ ದಿಸೆಯಲ್ಲಿ ಮಾತೋಶ್ರೀ ಚಿನಿವಾರ ಗಂಗಮ್ಮನವರ ಸ್ಮಾರಕ ವಿಶ್ವಸ್ಥ ಸಮಿತಿಯ ಅಧ್ಯಕ್ಷರಾಗಿ ಶಾಲೆ, ಕಾಲೇಜು, ಮಂಗಲಭವನ, ಉಚಿತ ಪ್ರಸಾದ ನಿಲಯಗಳ ಬೆಳವಣಿಗೆಯಲ್ಲಿ ಶೈಕ್ಷಣಿಕ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸಿದವರು. ಮಾನ್ಯ ಲಿಂ. ತಡಸದ ಶಂಕರಪ್ಪನವರು. ವಿಶ್ವಸ್ಥ ಸಂಸ್ಥೆಯ ಪೈಸೆ, ಪೈಸೆ ಹಣವನ್ನು ಸರ್ಪ ನಿಧಿಯನ್ನು ಕಾದಂತೆ ಕಾದು, ಹಣವನ್ನು ಸಾರ್ಥಕ ಕಾರ್ಯಗಳಲ್ಲಿ ತೊಡಗಿಸಿ ಅದರಲ್ಲಿಯೇ ತಮ್ಮ ಮೋಕ್ಷವನ್ನು ಕಂಡವರು ಶಂಕರಪ್ಪನವರು. ಯಜಮಾನ ಶಂಕರಪ್ಪನವರದು ಮಾತು ಕಡಿಮೆ ಕೆಲಸ ಬಹಳ. ಮಾತು ಬೆಳ್ಳಿ, ಮೌನ ಬಂಗಾರವೆಂಬಂತೆ, ಮಾತೇಕೆ ? ಕೃತಿ ಇರಲಿ ಎಂದು ಸಂಸ್ಥೆಯ ಅಭಿವೃದ್ಧಿಗೆ ಪರಿಶ್ರಮಿಸಿದ ಯಜಮಾನರ ಕರ್ತೃತ್ವ ಶಕ್ತಿ, ಬುದ್ಧಿವಂತಿಕೆ ಕ್ರಿಯಾಶೀಲ ಬದುಕಿನ ಬಗೆಗೆ ಸ್ಮಾರಕ ಗ್ರಂಥ ತರುತ್ತಿರುವುದು ಕೃತಜ್ಞತೆಯ ಸಂಕೇತವಾಗಿದೆ. ಈ ಸ್ಮರಣಗ್ರಂಥ ಅವರ ಸಾಧನೆ, ಸಿದ್ಧಿಗಳ, ಸಾರ್ಥಕ ಬದುಕಿನ ಚಿತ್ರಣವಾಗಿ ಇಂಥ ಸಾರ್ವಜನಿಕ ಕಾರ್ಯಗೈಯ್ಯುವವರಿಗೆ ದಾರಿದೀಪ, ತೋರುಬೆರಳಾಗಲಿ ಎಂದು ಹಾರೈಕೆ.

ಜಯಬಸವ

**ಶ್ರೀಮನ್ನಿರಂಜನ ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು**
ಸಂಸ್ಥಾನಮಠ ಡಂಬಳ-ಗದಗ

ತ್ವರಿತ ಮುದ್ರಣ, ಗದಗ

9 789392 187117